## ಮಾತು-ಕತೆ

"ನೀವೇನೋ ನನ್ನನ್ನು **established** ಅಂತ ಹೇಳ್ತೀರಿ. ಆದರೆ ನನಗೆ ಹಾಗೆ ಅನಿಸುವುದಿಲ್ಲ. ಅಲ್ಲಿ ಇಲ್ಲಿ ಯಾರೋ ಒಬ್ಬಿಬ್ಬರು ನನ್ನ ಅನುವಾದದ ಕುರಿತು ವಿಚಾರಿಸಿದ್ದಾರೆ, ಕೆಲವು ಪ್ರಕಾಶಕರು ನನ್ನ ಅನುವಾದಿತ ಕೃತಿಗಳನ್ನು ಪ್ರಕಟಿಸಿದ್ದಾರೆ. ಇದನ್ನು ಬಿಟ್ಟರೆ ನಾನು ಗುರುತಿಸಿಕೊಂಡದ್ದು ಕಡಿಮೆ."

"ಸೃಜನಶೀಲ ಸಾಹಿತ್ಯಕ್ಕೆ ಸಿಗುವಷ್ಟು ಮಹತ್ವ ಅನುವಾದ ಸಾಹಿತ್ಯಕ್ಕೆ, ಅನುವಾದಕರಿಗೆ ಸಿಗುವುದಿಲ್ಲವೆನ್ನುವ ಮಾತೇ ಇದೆಯಲ್ಲ. ಆ ಕಾರಣಕ್ಕಾಗಿ ಇರಬಹುದು," ಎಂದು ಹೇಳಿದ ಗೀತಾ ಶೆಣೈ ಅವರಿಗೆ ಅನುವಾದದ ವಾಸ್ತವ ಸ್ಥಿತಿ ಅನುವಾದಕರಾಗಿ ಗೊತ್ತಿರುವುದೇ.

"ನಾನು ಅನುವಾದಿಸಿರುವ ಕಮಲಾದಾಸ್ ಅವರ 175 ಕಥೆಗಳಲ್ಲಿ, 70 ಕಥೆಗಳು ಪ್ರಕಟಣೆಗೆ ಬಾಕಿ ಇವೆ. ಅವು ಪುಸ್ತಕ ರೂಪದಲ್ಲಿ ಬೆಳಕಿಗೆ ಬರಬೇಕೆನ್ನುವುದು ನನ್ನ ಇಚ್ಛೆ. ಈಗ ಪರಿಚಯದವರೊಬ್ಬರು ಪ್ರಕಟಿಸೋಣ ಎಂದಿದ್ದಾರೆ..." ಎಂದ ಗಂಗಾಧರನ್ ಅವರ ಮಾತಿನಲ್ಲಿ ಅನುವಾದವನ್ನು ನಿಲ್ಲಿಸುವುದಿಲ್ಲ ಎಂಬ ಸೂಚನೆ ಇತ್ತು.

"ನಿಮ್ಮ ಪ್ರಕಟಣೆಗಳಲ್ಲಿ 'ಗೌರಿ' ಕಥಾಸಂಕಲನವೂ ಇದೆಯಲ್ಲ. ಅದರಲ್ಲಿ ಹಲವು ಲೇಖಕರ ಕಥೆಗಳಿವೆ ಎಂದು ಕೇಳಿದ ನೆನಪು."

ಗೌರಿ ಸಂಕಲನದ ಹೆಸರಿನೊಂದಿಗೆ ಮಲಯಾಳಂ ಕತೆಗಾರ ವೈಕಂ ಮಹಮ್ಮದ್ ಬಶೀರ್ ನೆನಪಾಗಿ ಗಂಗಾಧರನ್ ಅವರಲ್ಲಿದ್ದ ಅನುವಾದಕ ಜಾಗೃತಗೊಂಡ. "ನಾನು ಅನುವಾದಿಸಿದ ವೈಕಂ ಅವರ 'ಜನ್ಮದಿನ' ಕಥೆಯನ್ನು ಮೊದಲು 'ಮಯೂರ' ಪ್ರಕಟಿಸಿ, ಆಮೇಲೆ ಅದು ಬೆಂಗಳೂರು ವಿಶ್ವವಿದ್ಯಾಲಯದ ಪಠ್ಯಪುಸ್ತಕಕ್ಕೂ ಆಯ್ಕೆ ಆಗಿತ್ತು. ಆ ಕಥೆ ಈ ಸಂಕಲನದಲ್ಲಿದೆ. ನೀವು ಏನೇ ಹೇಳಿ, ವೈಕಂ ಕಥೆಗಳನ್ನು ಅನುವಾದಿಸುವಾಗ ಮೂಲದ ಶೇ 30ರಷ್ಟನ್ನು ಮಾತ್ರ ತರುವುದು ಸಾಧ್ಯ. ಮೂಲ ಕಥೆಯ ಸೊಗಡು, ಅದನ್ನು ಓದುವಾಗ ಸಿಗುವ ಪ್ಲೆಶರ್, ಅವರು ಬಳಸುವ ಮಲಯಾಳಂ ಭಾಷೆಯ ಪಂಚ್ ಅನುವಾದದಲ್ಲಿ ದಕ್ಕುವುದು ಸಾಧ್ಯವೇ ಇಲ್ಲ. ವೈಕಂ ಕಥೆಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಮಲಯಾಳಂ ಕಲಿತು ಓದಬೇಕು ಎಂದು ಹರಿಹರಪ್ರಿಯ ಹೇಳುತ್ತಾರೆ. ಅವರ ಕಥೆಗಳನ್ನು ಅರ್ಥ ಮಾಡಿಕೊಂಡು ಅನುಭವಿಸಬೇಕಾದರೆ ಮಲಯಾಳಂ ಭಾಷೆಯನ್ನು ಕಲಿತು ಓದಬೇಕು ಎಂದು ಕಾದಂಬರಿಕಾರ ಆಲನಹಳ್ಳಿ ಕೃಷ್ಣ ಹೇಳುತ್ತಿದ್ದರು. ಸ್ವತಃ ವೈಕಂ ಅವರೇ ತನಗೆ ಮಲಯಾಳಂ ಭಾಷೆ ಸರಿಯಾಗಿ ಬರುವುದಿಲ್ಲವೆನ್ನುತ್ತಾರೆ. ಅವರಿಗೆ ಸಂದೇಹ ಬಂದ ಪದಗಳನ್ನು ಅವರು ಬಳಸುವುದೇ ಇಲ್ಲ. ಹೆಂಡತಿಗೆ 'ಭಾರ್ಯೆ' ಎನ್ನುವ ಪದವನ್ನು ಬಳಸುವುದರಲ್ಲಿ ಅವರಿಗೆ ಗೊಂದಲವಿತ್ತು. ಅವರು ಕೆಲವೆಡೆ ಮಾಪಿಳ್ಳೆ ಭಾಷೆಯನ್ನು ಬಳಸುತ್ತಾರೆ. ಅವರ 'ಹಾವು ಮತ್ತು ಕನ್ನಡಿ' ಎಂಬ ಕಥೆ ಇದೆ. ಅದನ್ನು ಕನ್ನಡಕ್ಕೆ ತಂದರೆ ಮೂಲದ ಸೊಗಸು ಸಿಗುವುದು ಕಷ್ಟ. ಅವರು ಬರೆದಿರುವುದೆಲ್ಲಾ ನಿಜಜೀವನದ ಅನುಭವಗಳೇ." ಪಠ್ಯ ಮರುಸೃಷ್ಟಿಯ ಸಫಲತೆಯ ಕುರಿತು ಗಂಗಾಧರನ್ ಹೇಳಿದ ಮಾತುಗಳನ್ನು ಒಪ್ಪಿಕೊಳ್ಳಲು ಗೀತಾ ಶೆಣೈ ಸಿದ್ಧರಿಲ್ಲ.

"ಇಂತಹ ಸಮಸ್ಯೆ ನನಗೆ ಕನಕದಾಸರ ಮುಂಡಿಗೆಗಳನ್ನು ಕೊಂಕಣಿಗೆ ಅನುವಾದಿಸುವಾಗ ಬಂದಿತ್ತು. ನನ್ನ ಪ್ರಕಾರ ನಾವು ಒಂದು ಭಾಷೆಯ ಪಠ್ಯ ಇನ್ನೊಂದು ಭಾಷೆಗೆ ಹೋದರಾಯಿತು ಎನ್ನುವ ಹಗುರ ಭಾವದಲ್ಲಿ ಅನುವಾದ ಕಾರ್ಯವನ್ನು ನಡೆಸಿದಾಗ ಇಂತಹ ಸಮಸ್ಯೆ ತಲೆದೋರಬಹುದೇನೋ. ಈಗ ಅನುವಾದಕಿಯಾಗಿ ನನ್ನ ಅನುಭವವನ್ನೇ ಹೇಳುವುದಾದರೆ, ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸುವಾಗ ಸಂದರ್ಭೋಚಿತ ನುಡಿಗಟ್ಟುಗಳು, ಸಮಾನಾರ್ಥ ಪದಗಳು ಕನ್ನಡದಲ್ಲಿ ಸಿಗದೆ ಇದ್ದಾಗ ಇಂಗ್ಲಿಷ್ ಎಷ್ಟು ಸಮೃದ್ಧ ಹಾಗೂ **flexible** ಭಾಷೆ